ದಿನಾಂಕಃ 07.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಪಿ.ಬಿ.ಐ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯ ಮಾಹಿತಿ ಯಾರು ಕೊಟ್ಟಿರುತ್ತಾರೆಂದರೆ ಸಾಕ್ಷಿಯು ನಮ್ಮ ತಾಯಿ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಾನು ಶಾಲೆ ಕಲಿತಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ಅಂದರೆ ವಾದಿಯ ಮದುವೆಯಾಗಿ ಸುಮಾರು 40 ವರ್ಷ ಮೇಲ್ಪಟ್ಟು ಆಗಿರಬಹುದು. ನನ್ನ ತಾಯಿಯ ತವರು ಮನೆ ಕೆಮ್ಮನಕೋಲ ಗ್ರಾಮ ಇರುತ್ತದೆ ಎಂದರೆ ನಿಜ. ವಡೇರಹಟ್ಟಿ ಗ್ರಾಮವು ನನ್ನ ತಂದೆಯ ಊರು ಇರುತ್ತದೆ ಎಂದರೆ ನಿಜ. ನಮ್ಮ ತಾಯಿ ಮದುವೆಯಾದಾಗಿನಿಂದಲೂ ವಡೇರಹಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತಾಳೆಂದರೆ ಸಾಕ್ಷಿಯು ನಾವು ಕೆಮ್ಮನಕೋಲ ಗ್ರಾಮದಲ್ಲಿ ವಾಸವಾಗಿರುತ್ತೇವೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಕೆಂಚವ್ವ ಪಟ್ಟ್ಯಾಳ ಇವಳು 1 ನೇ ಪ್ರತಿವಾದಿಯ ಹೆಂಡತಿ ಇದ್ದು, ವಾದಿಗೆ ಅಕ್ಕಳಾಗಬೇಕು ಎಂದರೆ ನಿಜ. ಸದರಿ ಕೆಂಚವ್ವಳ ಮದುವೆಯು ವಾದಿಯ ಮದುವೆಗಿಂತ ಮುಂಚೆಯಾಗಿರುತ್ತದೆ ಎಂದರೆ ನಿಜ. ಸದರಿ ಕೆಂಚವ್ವಳಿಗೆ ಮಕ್ಕಳು ಆಗಿರುವುದಿಲ್ಲ ಎಂದರೆ ನಿಜ. ಸದರಿ ಕೆಂಚವ್ವಳಿಗೆ ಮಕ್ಕಳು ಆಗುವುದಿಲ್ಲ ಎಂದು ಭರವಸೆ ಉಂಟಾಗಿದ್ದರಿಂದ ನನ್ನ ಅಜ್ಜಿ , ವಾದಿ ಮತ್ತು ಕೆಂಚವ್ವ ಸೇರಿಕೊಂಡು 1 ನೇ ಪ್ರತಿವಾದಿಗೆ 2 ನೇ ಮದುವೆಯನ್ನು ಮಾಡಿಕೊಳ್ಳಲು ಒಪ್ಪಿಗೆ ನೀಡಿರುತ್ತಾರೆಂದರೆ ಸರಿಯಲ್ಲ. ಆ ರೀತಿ ಒಪ್ಪಿಗೆಯನ್ನು ಕೊಟ್ಟಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸದರಿ ಮೇಲೆ ಹೇಳಿದ ಕೆಂಚವ್ವ ದಿ.23.02.2011 ರಂದು ತೀರಿಕೊಂಡಿರುತ್ತಾಳೆ. ಕೆಂಚವ್ವಳಿಗೆ ಮಕ್ಕಳು ಇರದೇ ಇದ್ದುದರಿಂದ ಅವಳು ತೀರಿಕೊಂಡ ನಂತರ ಅವಳ ಆಸ್ತಿಯು ಅವಳ ಗಂಡನಿಗೆ ಹೋಗುತ್ತದೆ ಎಂದು ತಿಳಿದು ವಾದಿ ಮತ್ತು ಅವಳ ತಾಯಿಯ ಹೆಸರಿಗೆ ಖೊಟ್ಟಿ ಹಕ್ಕುಬಿಟ್ಟ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಯಾವ ಆಸ್ತಿಗಳಿಗೆ ಸಂಬಂಧಿಸಿದಂತೆ ಹಕ್ಕುಬಿಟ್ಟ ಪತ್ರ ಮಾಡಿಕೊಟ್ಟಿರುತ್ತಾಳೆಂದರೆ ಸಾಕ್ಷಿಯು ದಾವಾ ಆಸ್ತಿಗಳಾದ ಸರ್ವೆ ನಂಬರ 29 ಹಾಗೂ ಸರ್ವೆ ನಂಬರ 355 ನೇದ್ದವುಗಳಿಗೆ ಸಂಬಂಧಿಸಿದಂತೆ ಪತ್ರ ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಹಕ್ಕುಬಿಟ್ಟ ಪತ್ರವು (ನಿಪಿ.13) ಕೇವಲ ಸರ್ವೆ ನಂಬರ 355/2 ನೇದ್ದಕ್ಕೆ ಮಾತ್ರ ಸಂಬಂಧಿಸಿದ್ದು ಇರುತ್ತದೆಂದರೆ ಸರಿಯಲ್ಲ.

ಕೆಂಚವ್ವ ತೀರಿಕೊಂಡ ನಂತರ 1 ನೇ ಪ್ರತಿವಾದಿ ವಾರಸಾ ಪ್ರಮಾಣಪತ್ರವನ್ನು ಪಡೆದುಕೊಂಡು ದಾವಾ ಆಸ್ತಿಗೆ ತನ್ನ ಹೆಸರನ್ನು ದಾಖಲಿಸಿಕೊಂಡಿರುತ್ತಾನೆಂದರೆ ನಿಜ. ಸದರಿ ಡೈರಿಯನ್ನು ಪ್ರಶ್ನಿಸಿ ಎಸಿ, ಬೈಲಹೊಂಗಲರವರ ಮುಂದೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ನಿಜ. ಸದರಿ ಮೇಲ್ಮನವಿಯು ವಜಾಗೊಂಡಿರುತ್ತದೆ ಎಂದರೆ ನಿಜ. ಸದರಿ ಎಸಿ ಯವರ ಆದೇಶವನ್ನು ಪ್ರಶ್ನಿಸಿ ಮಾನ್ಯ ಡಿಸಿಯವರ ಮುಂದೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ನಿಜ. ಸದರಿ ಮೇಲ್ಮನವಿಯು ಸಹ ವಜಾಗೊಂಡಿರುತ್ತದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

ನಿಪಿ.3 ರಿಂದ ನಿಪಿ.5 ರಂತೆ ಹಾಜರುಪಡಿಸಿದ ಪಹಣಿಪತ್ರಿಕೆಯಲ್ಲಿ ಮಹಾಲಿಂಗಪ್ಪಾ ಬಾಳಪ್ಪಾ ಸಾಯನ್ನವರ ಹೆಸರು ದಾಖಲು ಇರುತ್ತದೆ ಎಂದರೆ ನಿಜ. ನಮ್ಮ ದೊಡ್ಡವ್ವ ಅಂದರೆ ಕೆಂಚವ್ವಳು ದಾವಾ ಆಸ್ತಿಗೆ ಸಂಬಂಧಿಸಿದಂತೆ ನಮ್ಮ

ತಾಯಿ ಅಂದರೆ ವಾದಿ ಹಾಗೂ ನಮ್ಮ ಅಜ್ಜಿ ಕೆಂಚೆವ್ವಳ ಹೆಸರಿಗೆ ಹಕ್ಕುಬಿಟ್ಟ ಪತ್ರ ಮಾಡಿದ್ದು, ಆ ಪ್ರಕಾರ ಅವರು ಮಾಲೀಕರಾಗಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ 1 ನೇಪ್ರತಿವಾದಿ ಮಾಲೀಕನಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ